ದಿನಾಂಕ:12/9/2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಎದುರುದಾರರ ಪರಃ ಶ್ರೀ ಎಸ್.ಎಸ್.ಕೆ. ವಕೀಲರಿಂದಃ–**

1. ಈ ದಿನ ನಾನು ಮುಖ್ಯ ವಿಚಾರಣೆಯಾಗಿ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಗಳೆಲ್ಲಾ ಸತ್ಯವಾಗಿರುತ್ತವೆ. ಅದರ ಮೇಲಿರುವ ಸಹಿ ನನ್ನದೇ ಆಗಿರುತ್ತದೆ. ಇಂದು ಹಾಜರುಪಡಿಸಿದ ಲಗತ್ತ ದಾಖಲೆಗಳೊಂದಿಗಿದ್ದ Authorization letter ನ್ನು ನಿ.ಆರ್-22 ಅಂತಾ ಗುರುತಿಸಲಾಯಿತು.

**ಪಾಟೀ ಸವಾಲುಃ ಅರ್ಜಿದಾರರ ಪರವಾಗಿಃ ಶ್ರೀ ಕೆ.ಸಿ.ಪಿ. ವಕೀಲರಿಂದಃ–**

2. ನಿ.ಆರ್-22 ಕ್ಕೆ ಲಗತ್ತಿದ್ದ ಎಂ.ನಂಜುಂಡಸ್ವಾಮಿರವರು ಸ್ವತಃ ಬರೆದು ತಂದು ಕೊಟ್ಟಿದ್ದಾರೆ ಅಂದರೆ ಸಾಕ್ಷಿಯು ಪತ್ರದ ಮುಖೇನ ಕಳಿಸಿರುತ್ತಾರೆ ಅಂತಾ ಹೇಳುತ್ತಾರೆ. ಸದರಿ ಪತ್ರವನ್ನು ಅವರೇ ಸ್ವತಃ ಬರೆದಿರುತ್ತಾರೆ. ಆತ ಹೇಳಿದ ಹಾಗೆ ಕಣ್ಣಿನ ಯಾವುದೇ ನ್ಯೂನತೆ ಇಲ್ಲ ಅಂದರೆ ಸಾಕ್ಷಿಯು ಅವರ ಪತ್ರದಲ್ಲಿ ಕಣ್ಣಿನ ನೋವು ಇದೆ ಅಂತಾ ತಿಳಿಸಿದ್ದಾರೆ ಅಂತಾ ಹೇಳುತ್ತಾರೆ. ಅವರು ಸ್ವತಃ ನ್ಯಾಯಾಲಯದಲ್ಲಿ ಬಂದು ಸಾಕ್ಷ್ಯ ನುಡಿದರೆ ನಿಜ ಸಂಗತಿ ಹೊರಬರುತ್ತದೆ ಎಂಬ ಕಾರಣಕ್ಕಾಗಿ ನಮ್ಮ ಇಲಾಖೆಗೆ ಸುಳ್ಳು ಕಾರಣಗಳನ್ನು ತಿಳಿಸಿ, ಪತ್ರವನ್ನು ಕಳಿಸಿದ್ದಾರೆ ಅಂದರೆ ಸರಿಯಲ್ಲ. ಸದರಿಯವರು ಎಲ್ಲಿ ವಾಸವಾಗಿದ್ದಾರೆ ಅಂತಾ ನಿಖರವಾಗಿ ಹೇಳಲು ಬರುವುದಿಲ್ಲ. ಸದರಿಯವರು ಕೊಟ್ಟಂತಹ ವರದಿಯನ್ನು ಕಡತದಲ್ಲಿ ನೋಡಿದ್ದೇನೆ. ನಾನು ತರಬೇತಿ ನೌಕರ ಎಂಬ ಕುರಿತಾಗಿ ದಾಖಲೆಗಳನ್ನು ನೋಡಿ ಬರೆದಿದ್ದೇನೆ. ಪ್ರಾವಿಡೆಂಟ್ ಫಂಡ್ ನ್ನು ಟ್ರೈನಿ ತರಬೇತಿ ನೌಕರರಿಗೂ ಕೊಡುತ್ತೇವೆ. ಟ್ರೈನಿ ನೌಕರ ಅಂತಾ ಸುಳ್ಳಾಗಿ ನನ್ನ ಪ್ರಮಾಣ ಪತ್ರದಲ್ಲಿ ಬರೆಸಿದ್ದೇನೆ ಅಂದರೆ ಸರಿಯಲ್ಲ. ಸದರಿ ನಂಜುಂಡಸ್ವಾಮಿಯವರು ನಮ್ಮ ಸಂಸ್ಥೆಗೆ ಅರ್ಜಿದಾರನಿಗೆ ಸಂಬಂಧಿಸಿದಂತೆ ವರದಿಯನ್ನೇ ಸಲ್ಲಿಸಿಲ್ಲ ಅಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನನಗೆ ಯಾವುದೇ ಮಾಹಿತಿ ಇಲ್ಲ, ಆದರೂ ಕೂಡ ನನ್ನ ಪ್ರಮಾಣ ಪತ್ರದಲ್ಲಿ ಸತ್ಯಕ್ಕೆ ದೂರವಾದ ಸಂಗತಿಗಳನ್ನು ತಿಳಿಸಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

*(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)*

ಓ ಹೇ ಕೇ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾವೇರಿ.